OS No. 64/2021

PW-1

**(ಇಂದು ದಿಃ 17-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. HSR ವಕೀಲರಿಂದಃ-**

ನನ್ನ ಮುತ್ತ್ಯಾನ ಹೆಸರು ದೇವಪ್ಪ, ದೇವಪ್ಪನ ತಂದೆ ಹೆಸರು ನನಗೆ ಗೊತಿಲ್ಲ, ನನ್ನ ಅಜ್ಜಿ ಹೆಸರು ಅಯ್ಯಮ್ಮ. ನನ್ನ ಮುತ್ತ್ಯಾನಿಗೆ ಸಹೋದರರು ಇರಲಿಲ್ಲ, ಸಹೋದರಿಯರು ಇದ್ದ ಬಗ್ಗೆ ನನಗೆ ಗೊತಿಲ್ಲ, ನನ್ನ ಮುತ್ತ್ಯಾ ತೀರಿಹೋಗಿ ಸುಮಾರು 35-40 ವರ್ಷ ಆಗಿದೆ. ನನ್ನ ಅಜ್ಜಿಗೆ ಈಗ 80 ವರ್ಷ ವಯಸ್ಸು, ನನ್ನ ತಂದೆ 2021 ರಲ್ಲಿ ತೀರಿಹೋಗಿದ್ದಾರೆ. ನನ್ನ ಮುತ್ತ್ಯಾನಿಗೆ ಸರ್ವೆ ನಂಬರ 24 ರಲ್ಲಿ 12 ಎಕರೆ ಜಮೀನು ಇತ್ತು. ಸರ್ವೆ ನಂಬರ 21 ರಲ್ಲಿ 9 ಎಕರೆ 23

ಗುಂಟೆ, ಸರ್ವೆ ನಂಬರ 17 ರಲ್ಲಿ 3 ಎಕರೆ 39 ಗುಂಟೆ, ಸರ್ವೆ ನಂಬರ 9/2 ರಲ್ಲಿ 2 ಎಕರೆ 17 ಗುಂಟೆ ಜಮೀನು ಇತ್ತು. ಸರ್ವೆ ನಂಬರ 19/1 ರಲ್ಲಿನ 4 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ, ಸದರಿ ಜಮೀನನ್ನು ನನ್ನ ತಂದೆ ಕೊಂಡುಕೊಂಡಿದ್ದರು. ನನ್ನ ತಂದೆ ಖರೀದಿ ಮಾಡಿದ್ದರು ಎಂದು ತೋರಿಸಲು ಖರೀದಿ ಪತ್ರ ಹಾಜರುಪಡಿಸಿಲ್ಲ, ತೆಲ್ಲೂರ ಗ್ರಾಮದ ಸರ್ವೆ ನಂಬರ 82/5 ರಲ್ಲಿ 1 ಎಕರೆ 24 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ, ನನ್ನ ತಂದೆ ಗುತ್ತಿಗೆ ಕೆಲಸ ಮಾಡುತ್ತಿದ್ದರು ಅವರ ಸ್ವಂತ ಸಂಪಾದನೆಯಿಂದ ಸದರಿ ಜಮೀನನ್ನ ಖರೀದಿ ಮಾಡಿದ್ದರು. ನನ್ನ ತಂದೆ ಖರೀದಿ ಮಾಡಿದ್ದರು ಎಂದು ತೋರಿಸಲು ಖರೀದಿ ಪತ್ರ ಹಾಜರುಪಡಿಸಿಲ್ಲ, ನನ್ನ ಅಜ್ಜನಿಗೆ 4 ಜನ ಗಂಡ ಮಕ್ಕಳು, 4 ಜನ ಹೆಣ್ಣು ಮಕ್ಕಳು. 4 ಜನ ಗಂಡು ಮಕ್ಕಳ ಪೈಕಿ ಬಗವಂತ ಅವಿವಾಹಿತರಾಗಿ ತೀರಿಹೋಗಿದ್ದಾರೆ. ನನ್ನ ತಂದೆ ಹಿರಿಯ ಮಗ ಎಂದರೆ ಸರಿ. ನನ್ನ ಅಜ್ಜ ತೀರಿಹೋದ ನಂತರ ಮನೆಯ ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸಂಗಾವಿ ಮತ್ತು ತೆಲ್ಲೂರಿನಲ್ಲಿನ ಎಲ್ಲಾ ಜಮೀನುಗಳನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಆತ ಹೇಳಿದಂತೆ ಆತನ ಸಹೋದರರು ಕೇಳುತ್ತಿದ್ದರು ಎಂದರೆ ಸರಿ.

ನನ್ನ ಅಜ್ಜ ತೀರಿಹೋದ ನಂತರ ನನ್ನ ತಂದೆ ಮತ್ತು ಆತನ ಸಹೋದರರು ಬೇರೆಯಾಗಿದ್ದರೆ. ಅವರು ಬೇರೆಯಾಗಿದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ, ನಾನು ನನ್ನ ತಂದೆ ತಾಯಿ ಒಟ್ಟು ಕುಟುಂಬದಿಂದ ಬೇರೆ ವಾಸ ಇದೇವೆ ಎಂದು ತೋರಿಸಲು ರೇಷನ ಕಾರ್ಡ ಅಥವಾ ಬೇರೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ, ಯಾವ ಮನೆಯಲ್ಲಿ ಪ್ರತ್ಯೇಕವಾಗಿ ವಾಸ ಇದ್ದೆವೆ ಎಂದು ತೋರಿಸಲು ಸದರಿ ಮನೆಯ ಕರಪಾವತಿ ರಶಿದಿ ಅಥವಾ ವಿದ್ಯುತ ಬಿಲ್ ಹಾಜರುಪಡಿಸಿಲ್ಲ,

ಸರ್ವೆ ನಂಬರ 24 ರ ಜಮೀನು ಮೊದಲು ನನ್ನ ಮುತ್ಯಾನ ಹೆಸರಿನಲ್ಲಿತ್ತು. ನಂತರ ನನ್ನ ಅಜ್ಜಿ ಹೆಸರಿಗೆ ಆಯಿತು. ಸದರಿ ಸಂಗತಿಗಳನ್ನು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ, ಈ ದಾವೆ ಸಲ್ಲಿಸುವಾಗ ನನ್ನ ತಾಯಿ ಮಲ್ಲಮ್ಮಳನ್ನು ಈ ದಾವೆಗೆ ಪಾರ್ಟಿ ಮಾಡಿರಲಿಲ್ಲ ಎಂದರೆ ಸರಿ. ತಾಯಿ ಹೆಸರಿನಲ್ಲಿದ್ದ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ಸದರಿ ಆಸ್ತಿಯನ್ನು ಮತ್ತು ನನ್ನ ತಾಯಿಯನ್ನು ದಾವೆಯಲ್ಲಿ ಸೇರಿಸಿರಲಿಲ್ಲ

ಎಂದರೆ ಸರಿಯಲ್ಲ. ಸರ್ವೆ ನಂಬರ 19/1 ಮತ್ತು 82/5 ರಲ್ಲಿನ ಜಮೀನುಗಳನ್ನು ಈ ದಾವೆ ಸಲ್ಲಿಸುವ ಮುಂಚೆ ಖರೀದಿ ಮಾತುಕತೆ ಮಾಡಿಕೊಂಡು ನಂತರ ಸದರಿ ಜಮೀನುಗಳನ್ನು ನನ್ನ ತಾಯಿ ಸಹಿ ಪಡೆದುಕೊಂಡು ನಾನು ಖರೀದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ನಾವು ಮಾರಾಟ ಮಾಡಿರುವ ಕಾರಣ ಅವು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಗುತ್ತಿಗೆ ಕೆಲಸ ಮಾಡುತ್ತಿದ್ದರು. ಆಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ನಾನು ವಾದ ಪತ್ರದಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ಗುತ್ತಿಗೆ ಕೆಲಸ ಮಾಡಿದರು ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ನನ್ನ ತಂದೆ ಯಾವುದೇ ಗುತ್ತಿಗೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ಚಿಕ್ಕಪ್ಪಂದಿರನ್ನು ತೋಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 19/1 ಮತ್ತು 82/5 ರ ಜಮೀನುಗಳನ್ನು ನನ್ನ ತಂದೆ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದರು ಆದರೆ ನಾವು ಅವುಗಳನ್ನು ಮಾರಾಟ ಮಾಡಿ ಕೇವಲ ದಾವಾ ಸ್ವತ್ತುಗಳಿಗೆ ದಾವೆ ಸಲ್ಲಿಸಿ ಮೇಲಿನ ಜಮೀನುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಿರಿಯ ಮಗನಾದ ಕಾರಣ ಒಟ್ಟು ಕುಟುಂಬದ ಕಾರಣ ಆತನ ಹೆಸರಿಗೆ ಖರೀದಿಮಾಡಲಾಗಿದೆ ಎಂದರೆ ಸರಿಯಲ್ಲ.

ನನ್ನ ತಂದೆಯ ಅಕ್ಕ ತಂಗಿಯರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ದಾವಾ ಸ್ವತ್ತುಗಳಲ್ಲಿ ನನ್ನ ಸಹೋದರಿಯರಿಗೆ ಭಾಗ ಇದ್ದರೂ ಕೂಡ ಏಕೆ ಪಾರ್ಟಿ ಮಾಡಿರಲಿಲ್ಲ ಎಂದರೆ ಹೇಳಲು ಆಗುವುದಿಲ್ಲ. ನನ್ನ ತಾಯಿಗೆ ಮತ್ತು ಚಿಕ್ಕಪ್ಪಂದಿರಿಗೆ ಕಿರುಕುಳ ಕೊಡುವ ಸಲುವಾಗಿ ಮತ್ತು ನನ್ನ ಸಹೋದರಿಯರಿಗೆ ಪಾಲು ಕೊಡಬಾರದು ಎಂಬ ದುರುದ್ದೇಷದಿಂದ ಈ ದಾವೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಕಾನೂನು ಪ್ರಕಾರ ದಾವಾ ಜಮೀನುಗಳಲ್ಲಿ ವಾದಿಯರಿಗೆ ಮತ್ತು ಪ್ರತಿವಾದಿಯರಿಗೆ ಹಕ್ಕು ಇದೆ ಎಂದರೆ ಸರಿ. ಸರ್ವೆ ನಂಬರ 19/1 ಮತ್ತು 82/5 ರಲ್ಲಿ ನ ಜಮೀನುಗಳನ್ನು ಮತ್ತು ದಾವಾ ಸ್ವತ್ತುಗಳನ್ನು ಒಟ್ಟು ಸೇರಿಸಿ ಭಾಗ ಮಾಡಿಕೊಡಬೇಕು ಎಂದು ನನ್ನ ಅಜ್ಜಿ ಹೇಳಿದ್ದರು ಆದರೂ ಕೂಡ ನಾವು ಮೇಲಿನ 2 ಜಮೀನುಗಳನ್ನುಬಿಟ್ಟು ಈ

ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ಚಿಕ್ಕಪ್ಪಂದಿರು ನನ್ನ ಮಾತು ಕೇಳದ ಕಾರಣಕ್ಕೆ ಅವರ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 19/1 ಮತತು 82/5 ರಲ್ಲಿನ ಜಮೀನುಗಳಲ್ಲಿ ಕೂಡ ದಾವಾ ಸ್ವತ್ತಿನ ಜೊತೆ ಭಾಗ ಮಾಡಲು ಪ್ರತಿವಾದಿಯರು ಒಪ್ಪಿ ದ್ದರೆ ಎಲ್ಲದ್ದರಲ್ಲಿ ಭಾಗ ಮಾಡಲು ವಾದಿಗೆ ತಕಾರಾರು ಇಲ್ಲ ಎಂದರೆ ಆ 2 ಜಮೀನುಗಳು ನನ್ನ ತಂದೆಯ ಸ್ವಂತ ಆಸ್ತಿಗಳು ಎಂದು ಹೇಳುತ್ತಾರೆ. ನನ್ನ ತಂದೆ ಒಟ್ಟು ಕುಟುಂಬದಿಂದ ಬೇರೆ ಆಗಿ ಸ್ವಂತ ಸಂಪಾದನೆ ಮಾಡಿ ಮೇಲಿನ ಜಮೀನುಗಳನ್ನು ಖರೀದಿ ಮಾಡಿದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಸದರಿ ಸಂಗತಿಗಳನ್ನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಮೇಲಿನ 2 ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿದ್ದರೆ ದಾವಾ ಸ್ವತ್ತುಗಳಲ್ಲಿ ಭಾಗ ಮಾಡಲು ಪ್ರತಿವಾದಿಯರು ತಕರಾರು ಇಲ್ಲ ಎಂದರೆ ಸದರಿ ಜಮೀನುಗಳು ನನ್ನ ತಂದೆಯ ಸ್ವಂತ ಜಮೀನುಗಳು ಎಂದು ಹೇಳುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**